ಸೃಜನಿ

**SRUJANI: Indian Journal of Innovative Research and Development (SIJIRD)**
Volume-5 Issue 1, March-April 2026, Pp. 98-103
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಅಮರೇಶ ನುಗಡೋಣಿಯವರ ಕಥೆಗಳಲ್ಲಿ ಪ್ರಾದೇಶಿಕತೆಯ ಸ್ವರೂಪ

**ಡಾ. ಲೋಕೇಶ ಎಂ. ಆರ್**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವಾಪಟ್ಟಣ

**Abstract:**
*ಅಮರೇಶ ನುಗಡೋಣಿಯವರ ಕಥೆಗಳಲ್ಲಿ ಉತ್ತರ ಕರ್ನಾಟಕದ ಗ್ರಾಮೀಣ ಬದುಕು, ಜನಜೀವನ ಮತ್ತು ಸ್ಥಳೀಯ ಸಂಸ್ಕೃತಿಯ ವೈಶಿಷ್ಟ್ಯಗಳು ವಿಶಿಷ್ಟವಾಗಿ ಅಭಿವ್ಯಕ್ತಗೊಂಡಿವೆ. ಅವರ ಕಥೆಗಳಲ್ಲಿ ಪ್ರಾದೇಶಿಕ ಭಾಷೆ, ಆಡುಮಾತು, ಜನಪದ ಆಚರಣೆಗಳು, ನಂಬಿಕೆಗಳು ಹಾಗೂ ಸಾಮಾಜಿಕ ಸಂಬಂಧಗಳು ಪ್ರಾದೇಶಿಕತೆಯ ಪ್ರಮುಖ ಅಂಶಗಳಾಗಿ ಮೂಡಿಬರುತ್ತವೆ. ಗ್ರಾಮೀಣ ಪರಿಸರ, ಕೃಷಿ ಬದುಕು, ಜನರ ವೃತ್ತಿ, ಆರ್ಥಿಕ ಸ್ಥಿತಿ ಮತ್ತು ಸಾಮಾಜಿಕ ಸಂಘರ್ಷಗಳು ಕಥೆಗಳ ವಸ್ತು–ವಿನ್ಯಾಸದಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಸ್ಥಳೀಯ ಭಾಷಾ ಪ್ರಯೋಗ ಮತ್ತು ಬದುಕಿನ ನೈಜ ಚಿತ್ರಣದ ಮೂಲಕ ಲೇಖಕರು ಪ್ರಾದೇಶಿಕ ಸಮಾಜದ ಸಾಂಸ್ಕೃತಿಕ ಅಸ್ಮಿತೆಯನ್ನು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಈ ಅಧ್ಯಯನವು ಅಮರೇಶ ನುಗಡೋಣಿಯವರ ಕಥೆಗಳಲ್ಲಿ ವ್ಯಕ್ತವಾಗುವ ಪ್ರಾದೇಶಿಕತೆಯ ಸ್ವರೂಪ, ಅದರ ಸಾಮಾಜಿಕ–ಸಾಂಸ್ಕೃತಿಕ ಆಯಾಮಗಳು ಮತ್ತು ಸಾಹಿತ್ಯಿಕ ಮಹತ್ವವನ್ನು ವಿಶ್ಲೇಷಿಸುತ್ತದೆ.*

**Keywords:** *ಅಮರೇಶ ನುಗಡೋಣಿ, ಪ್ರಾದೇಶಿಕತೆ, ಉತ್ತರ ಕರ್ನಾಟಕ, ಗ್ರಾಮೀಣ ಬದುಕು, ಜನಪದ ಸಂಸ್ಕೃತಿ*

## ಪೀಠಿಕೆ

ಅಮರೇಶ ನುಗಡೋಣಿಯವರು ಕನ್ನಡದ ಶ್ರೇಷ್ಠ ಕಥೆಗಾರರಲ್ಲೊಬ್ಬರು. ಇವರ ಮಣ್ಣು ಸೇರಿತು ಬೀಜ, ತಮಂಧದ ಕೇಡು, ಸವಾರಿ, ಒಡಲಹಂಗು, ಚುಕ್ಕಿ ಮದುವೆ ಪ್ರಸಂಗ ಎಂಬ ಕಥಾ ಸಂಕಲಗಳನ್ನು ರಚಿಸಿ ಆಧುನಿಕ ಕಥಾ ಸಾಹಿತ್ಯದ ಬೆಳವಣಿಗೆಗೆ ತಮ್ಮದೆ ಆದ ವಿಶಿಷ್ಟ ಕೊಡುಗೆಯನ್ನು ನೀಡಿ ಮುಂದಿನ ಕಥೆಗಾರರಿಗೆ ಹೊಸ ಮಾದರಿಯನ್ನು ಒದಗಿಸಿದ ಸಮರ್ಥ ಕಥೆಗಾರರಾಗಿದ್ದಾರೆ. ಅಮರೇಶ ನುಗಡೋಣಿಯವರ ಮೊದಲ ಸಂಕಲನ ಮಣ್ಣು ಸೇರಿತು ಬೀಜ ಪ್ರಕಟವಾದ ವರ್ಷದಲ್ಲಿಯೇ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದ ಕೃತಿ. ಇವರನ್ನು ಅನೇಕ ಪ್ರಶಸ್ತಿಗಳು ಹರಸಿ ಬಂದಿವೆ. ಇವರು ಸಂಶೋಧಕರಾಗಿ, ಸಂಪಾದಕರಾಗಿ ಅನೇಕ ಸಂಶೋಧನಾ ಕೃತಿಗಳನ್ನು ಹಾಗೂ ಸಂಪಾದನಾ ಕೃತಿಗಳನ್ನು ಸಂಪಾದಿಸಿದ್ದಾರೆ. ಕಥೆಗಳಲ್ಲಿ ಪ್ರಾದೇಶಿಕತೆ, ಕಾದಂಬರಿಗಳಲ್ಲಿ ಪ್ರಾದೇಶಿಕತೆ ಎಂಬಂತಹ ಅಧ್ಯಯನಗಳು ಕಾಣಿಸಿಕೊಂಡಿದ್ದು ಎಂಬರ ದಶಕದಿಂದ ಈಚೆಗೆ. ದಟ್ಟ ಪ್ರಾದೇಶಿಕ ಭಾಷೆ ಮತ್ತು ಅನುಭವ ಮಂಡನೆಯಲ್ಲಿ ಹೊಸ ಮಾದರಿಯನ್ನು ಸೃಷ್ಟಿಸಿದ ದೇವನೂರ ಮಹಾದೇವರ ಸಾಹಿತ್ಯವನ್ನು ಈ ರೀತಿಯಾಗಿ ಅಧ್ಯಯನ ಮಾಡಿದ ವಿವರಗಳು ಕಾಣಬರುವುದಿಲ್ಲ ಆದರೆ ಪ್ರಾದೇಶಿಕತೆ ಮುನ್ನಲೆಗೆ ಬಂದದ್ದು 90ರ ದಶಕದಲ್ಲಿ ಬಂಡವಾಳ ಶಾಹಿ ಜಾಗತೀಕರಣ ಉದಾರೀಕರಣ

**Please cite this article as:** ಲೋಕೇಶ, ಎಂ. ಆರ್. (2026). ಅಮರೇಶ ನುಗಡೋಣಿಯವರ ಕಥೆಗಳಲ್ಲಿ ಪ್ರಾದೇಶಿಕತೆಯ ಸ್ವರೂಪ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 98–103

ಖಾಸಗೀಕರಣದದಂತಹ ಪ್ರಭಾವ ಮತ್ತು ದಾಳಿಯಿಂದಾಗಿ ಗ್ರಾಮದ ಸಂಸ್ಕೃತಿ; ಆಗ್ರಾಮ್ಯಜನ್ಯವಾದ ಮತ್ತು ಅನನ್ಯವಾದ ಬಹುಮುಖಿ ಜೀವನ ಪದ್ಧತಿಯು ಸಾಧಾರಣೀಕರಣಗೊಳ್ಳುತ್ತಿರುವ ದುರಂತ ಇವೆಲ್ಲವೂ ಬಹುಪಾಲು ಬರಹಗಾರರನ್ನು ಪ್ರಾದೇಶಿಕತೆಯ ಕಡೆ ಹೊರಳಿಸಿವೆ. ಈ ತರಹದ ಅಧ್ಯಯನಗಳಲ್ಲಿ ತೊಡಗಿಸಿವೆ. ದೇಶೀಯತೆ, ಪ್ರಾದೇಶಿಕತೆ, ಸ್ಥಳೀಯತೆಯ ಪರಿಕಲ್ಪನೆಗಳು ಹುಟ್ಟಿಕೊಂಡು ತಮ್ಮ ಗ್ರಾಮ ಸಮುದಾಯದ ಅನುಭವ ಶ್ರೀಮಂತಿಕೆಯ ಬಗ್ಗೆ ಪಡೆದ ಹೊಸ ಎಚ್ಚರದಿಂದಾಗಿ ತಮ್ಮ ಗ್ರಾಮದ ಮೂಲ ನೆಲೆಗಳಾದ ಪ್ರದೇಶ, ಭಾಷೆ, ಬದುಕು ಮತ್ತು ಬದುಕಿನ ವಿಧಾನಗಳನ್ನು ಬಹುಪಾಲು ಲೇಖಕರು ದಾಖಲಿಸಿದ್ದಾರೆ. ಈ ಹಿಂದಿನ ಕಥೆ ಕಾದಂಬರಿಗಳಲ್ಲಿ ಸಮುದಾಯದ ಅನುಭವ ಕೇವಲ ಮಂಡನೆಯ ರೂಪದಲ್ಲಿ, ವಾಸ್ತವಿಕ ರೂಪದಲ್ಲಿ ಗ್ರಹಿಸಲ್ಪಡುತ್ತಿತ್ತು. ಭಾಷೆ ಕೇವಲ ಸಂಭಾಷಣೆಯ ಮಟ್ಟದಲ್ಲಿ ಬರುತ್ತಿತ್ತು ಆದರೆ ಈಗಿನ ಲೇಖಕರು ಭಾಷೆ ಮತ್ತು ಅನುಭವವನ್ನು ಪ್ರಾಂತೀಯ ವೈಶಿಷ್ಟ್ಯತೆಯ ಆಡು ಮಾತಿನ ಜಾನಪದೀಯತೆಗೆ ಒಳಪಡಿಸಿದ್ದಾರೆ. ಆದರೆ ಇಂದು ಈ ತರಹದ ಹಪಾಹಪಿ ಬಹುಪಾಲು ತರುಣ ಲೇಖಕರಲ್ಲಿ ಅದರಲ್ಲೂ ಹೈದರಾಬಾದ್ ಕರ್ನಾಟಕದ ಕಥೆಗಾರರಲ್ಲಿ ಹೆಚ್ಚು ಕಾಣಬಹುದು. ಹೈದರಾಬಾದ್ ಕರ್ನಾಟಕ ಭಾಗದ ಪ್ರಾತಿನಿಧಿಕ ಕಥೆಗಾರರಾದ ಅಮರೇಶ್ ನುಗಡೋಣಿಯವರು ಹೊಸ ತಲೆಮಾರಿನ ಯುವ ಬರಹಗಾರರಿಗೆ ಒಂದು ಹೊಸ ಮಾದರಿಯನ್ನು ಸೃಷ್ಟಿಸಿ ಅನುಸರಿಸುವಂತೆ ಮಾಡಿದ್ದಾರೆ. ಇವರ ಇಡೀ ಕಥಾ ಸಾಹಿತ್ಯ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಸುತ್ತಮುತ್ತಲ ಗ್ರಾಮಗಳ ಪ್ರಾದೇಶಿಕತೆಯನ್ನು ಆವರಿಸಿಕೊಂಡು ಸೃಷ್ಟಿಯಾಗಿದೆ ತನ್ನ ಮೊದಲ ಕಥೆ ಮಣ್ಣು ಸೇರಿತು ಬೀಜವನ್ನು ಸತತವಾಗಿ ಆರು ತಿಂಗಳ ಕಾಲ ಬರೆದಿದ್ದೇನೆ ಹಾಗೂ ನಾನು 30 ವರ್ಷಗಳಲ್ಲಿ 40 ಕಥೆಗಳನ್ನು ಮಾತ್ರ ಬರೆದಿದ್ದೇನೆ ಈಗಲೂ ನಾನು ಕಥೆಯನ್ನು ಬರೆಯಲು ಕೂತರೆ ಮೊದಲ ಕಥೆಯನ್ನು ಬರೆದ ಅನುಭವವಾಗುತ್ತದೆ ಎನ್ನುತ್ತಾರೆ ಇವರ ಮಾತುಗಳನ್ನು ಗಮನಿಸಿದರೆ ಅಮರೇಶ ನುಗಡೋಣಿಯವರಂತೆ ಕಥಾ ಮಾಧ್ಯಮವನ್ನು ಅಷ್ಟೊಂದು ಗಾಢವಾಗಿ ಮತ್ತು ಗಂಭೀರವಾಗಿ ಅಪ್ಪಿಕೊಂಡು ಕಥೆ ಕಟ್ಟಿದವರು ಬಹಳ ವಿರಳ. ಇವರು ಕೇವಲ ಕಥೆ ಬರೆಯಬೇಕೆಂಬ ಏಕೈಕ ಉದ್ದೇಶದಿಂದ ಬರೆದವರಲ್ಲ; ತಾವು ಕಂಡ ಬದುಕಿನ ಮತ್ತು ಗ್ರಾಮೀಣ ಸಮಾಜದ ಅನುಭವವನ್ನು ಹತ್ತಿರದಿಂದ ನೋಡಿ, ಅನುಭವಿಸಿ, ಧ್ಯಾನಸ್ಥರಾಗಿದ್ದು ತಾಳ್ಮೆಯಿಂದ ಮತ್ತು ಅಸ್ಥೆಯಿಂದ ತಾನು ಕಂಡ ಗ್ರಾಮದ ಪ್ರಾದೇಶಿಕತೆಯನ್ನು ಕಥೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಪ್ರಸ್ತುತ ಈ ಲೇಖನದಲ್ಲಿ ಅಮರೇಶ ನುಗಡೋಣಿಯವರ ಕಥೆಗಳಲ್ಲಿ ವ್ಯಕ್ತವಾದ ಪ್ರಾದೇಶಿಕತೆಯನ್ನು ಗುರುತಿಸುವಂತಹ ಪ್ರಯತ್ನ ಮಾಡಲಾಗಿದೆ. ನನ್ನ ಕಥೆಗಳು ಹೈದರಾಬಾದ್ ಕರ್ನಾಟಕದ ಸುಮಾರು 350ಕ್ಕಿಂತ ಕಮ್ಮಿ ಮಂದಿಯುಳ್ಳ ಒಂದು ಪುಟ್ಟ ಊರಿಗೆ ಬದ್ಧವಾಗಿವೆ ಎಂದು ಅಮರೇಶ ನುಗಡೋಣಿಯವರೇ ಹೇಳಿರುವುದರಿಂದ ಇವರ ಕಥೆಯ ಕೇಂದ್ರ ಒಂದು ಗ್ರಾಮ ಮತ್ತು ಅಲ್ಲಿಯ ಬದುಕನ್ನು, ಅಲ್ಲಿಯ ಸಮುದಾಯವನ್ನು ಕುರಿತ ಹಾಗೂ ಆ ಗ್ರಾಮದ ಸಕಲ ಪ್ರಾದೇಶಿಕ ಗುಣ ವಿಶೇಷಗಳನ್ನು ಒಳಗೊಂಡು ರಚಿತವಾಗಿವೆ. ಅವರ ಕಥೆಗಳಲ್ಲಿಯ ಗ್ರಾಮಗಳು ಅಲ್ಲಿಯ ಭೌಗೋಳಿಕ ಪರಿಸರ, ಭಾಷೆ, ಪ್ರಕೃತಿ, ಹಕ್ಕಿ–ಪಕ್ಷಿಗಳು, ಕ್ರಿಮಿ–ಕೀಟಗಳು, ತುಂಬಿ ಹರಿಯುವ ಗಂಗವ್ವ, ಹಳ್ಳ– ಕೊಳ್ಳಗಳು, ಉರಿಬಿಸಿಲು, ಸಾಕು ಪ್ರಾಣಿಗಳು ಹಾಗೂ ಭಿನ್ನವಾದ ಮನುಷ್ಯ ಜಗತ್ತು, ಆಚರಣೆಗಳು, ಹಬ್ಬ– ಹರಿದಿನಗಳು, ಜಾನಪದ ಆಚರಣೆಗಳು, ಧಾರ್ಮಿಕ ಕ್ರಿಯಾ ವಿಧಿಗಳು ಹಾಗೂ ಅಲ್ಲಿಯ ಜನರ ಆಹಾರ ಪದ್ಧತಿ ಉಡುಗೆ–ತೊಡುಗೆಗಳು, ಆಟಗಳು, ಗುಣ – ಸ್ವಭಾವಗಳು, ಆಚಾರ ವಿಚಾರ, ನಡೆ–ನುಡಿಗಳು, ಸಾಮಾಜಿಕ

ಮತ್ತು ಆರ್ಥಿಕ ಸಂಗತಿಗಳಿಂದ ವೈಶಿಷ್ಟ ಪೂರ್ಣವಾಗಿವೆ.

ಅಮರೇಶ ನುಗಡೋಣಿಯವರ ಬಹುತೇಕ ಕಥೆಗಳಲ್ಲಿನ ಪ್ರಧಾನಧಾರೆ ಬಡತನ, ಇಡೀ ಗ್ರಾಮವನ್ನ ನಿಯಂತ್ರಿಸಿ ನಿರ್ದೇಶಿಸುವ ಜಮೀನ್ದಾರಿ ಪದ್ಧತಿ. ಗ್ರಾಮಗಳ ಒಳ ಹರಿವನ್ನು ನಿಯಂತ್ರಿಸುವ ತುಂಗವ್ವನಂಥಹ ಹೊಳೆ, ಗೌಡರ ದರ್ಪ, ಕ್ರೌರ್ಯ, ಲೈಂಗಿಕ ದೌರ್ಜನ್ಯ, ಬಡತನ, ಮುಗ್ಧತೆ, ಶಕ್ತಿ ಇಲ್ಲದ ದುರ್ಬಲ ಸಮುದಾಯವಿದೆ. ಅಲ್ಲದೆ ಜಮೀನ್ದಾರಿ ಪದ್ಧತಿಯೇ ಮುಂದೆ ಹೊಸ ವೇಷವನ್ನು ತಾಳಿ ಬಂಡವಾಳ ಶಾಹಿ ಆಳುವ ವರ್ಗವಾಗಿ ರೂಪ ತಾಳಿದೆ. ದಾಳಿ ನಡೆದ ಅಣ್ಣ ಕಥೆಯಲ್ಲಿ ಗಣಿಗಾರಿಕೆ ತನ್ನ ಕರಾಳ ರೂಪ ತಾಳಿ ತನ್ನ ಕದಂಬ ಬಾಹುವನ್ನು ಗ್ರಾಮದ ಮೇಲೆ ಚಾಚಿ ಗ್ರಾಮವನ್ನು ತಲ್ಲಣ ಗೊಳಿಸಿದ ಚಿತ್ರಣವಿದೆ. ಗ್ರಾಮದ ಜನರು ಬದುಕಿ ಬಾಳಿ ನಂಬಿಕೊಂಡು ಬಂದ ನಂಬಿಕೆಗಳನ್ನು, ಆಚರಣೆಗಳನ್ನು ಬುಡಮೇಲು ಮಾಡಿದೆ. ಇಡೀ ಗ್ರಾಮವೇ ಅಸ್ಪಷ್ಟವಾಗಿದೆ. ಹಲವು ಕುಟುಂಬಗಳು ಕೌಟುಂಬಿಕ ಸಂಬಂಧ ವಿಘಟನೆಗೊಂಡು ತಲ್ಲಣಗೊಂಡಿವೆ. ಹೀಗೆ ನುಗಡೋಣಿಯವರು ಗ್ರಾಮದಲ್ಲಿ ನಡೆಯುವ ವಿಶಿಷ್ಟಾಂಶಗಳೊಂದಿಗೆ ಸಕಲ ವೈಶಿಷ್ಟಗಳೊಂದಿಗೆ ಪ್ರಾದೇಶಿಕತೆಯನ್ನು ಕಟ್ಟಿಕೊಡುತ್ತಾರೆ ಅವರ ಕಥೆಗಳಲ್ಲಿ ಕಂಡು ಬರುವ ಪ್ರಾದೇಶಿಕತೆಯ ಕೆಲವು ಸ್ಯಾಂಪಲ್‌ಗಳನ್ನು ಅವರ ಕಥೆಯ ಮೂಲಕ ಉದ್ಧರಿಸುವುದಾದರೆ 'ದಾಳಿ ನಡೆದಾವೋ ಅಣ್ಣ' ಕಥೆಯಲ್ಲಿ ಗ್ರಾಮದ ಭೌಗೋಳಿಕ ಪರಿಸರವನ್ನು ಈ ರೀತಿ ಕಟ್ಟಿಕೊಡುತ್ತಾರೆ ಎಂಥ ಚಂದದ ಶಿವನ ಕೊಳ್ಳ ಎಡಬಲಕ್ಕೆ ಹಬ್ಬಿರುವ ಬೆಟ್ಟಗಳ ನಡುವೆ ಜೋಗುಳದಲ್ಲಿ ಹರಿಯುವ ಹಳ್ಳ, ದಂಡೆಗುಂಟ ಕಾಡಿನಂತೆ ಬೆಳೆದ ಮರಗಳು ಬೆಳ್ಳನೆಯ ಉಸಿಕಿನ ಹಸಿರು ತಿಳಿ ನೀರಿನ ಅರಿವು ಹಕ್ಕಿ–ಪಕ್ಷಿಗಳ ಸಂಸಾರ, ಹಳ್ಳದಲ್ಲಿ ನಡುನಡುವೆ ಸಣ್ಣ ಸಣ್ಣ ದಿಬ್ಬಗಳ ಚೆಲುವಿನ ನೆಲೆಯಾದ ಅಲ್ಲಿ ಶಿವ ಪಾರ್ವತಿ ಕೈಲಾಸದಿಂದ ಬಂದು ಕಾಲ ಕಳೆಯುತ್ತಿದ್ದರಂತೆ ಅದನ್ನು ಕಂಡ ಶಿವ ಪಾರ್ವತಿಯ ಮಗ ಕುಮಾರಸ್ವಾಮಿ ಮರಳಿ ಕೈಲಾಸಕ್ಕೆ ಹೋಗದೆ ಈ ಸರಹದ್ದಿನ ಬೆಟ್ಟ ಒಂದರಲ್ಲಿ ನೆಲೆ ನಿಂತನಂತೆ ಊರಿನ ಜನರಿಗೆ ಶಿವನ ಕೊಳ್ಳ ಎಂದರೆ ಉಸಿರೇ ಆಗಿತ್ತು ಹೀಗೆ ಶಿವನ ಕೊಳ್ಳ ಎಂಬ ಗ್ರಾಮದ ಸುಂದರ ಪರಿಸರವನ್ನು ಕಟ್ಟಿಕೊಡುತ್ತಲೇ ಅಂತಹ ಸೊಬಗಿನಿಂದ ಕೂಡಿದ ಶಿವನ ಕೊಳ್ಳ ರೆಡ್ಡಿಗಳ ಗಣಿಗಾರಿಕೆಯಿಂದಾಗಿ ತನ್ನ ಮೊದಲಿನ ಸೌಂದರ್ಯವನ್ನು ಕಳೆದುಕೊಂಡಿದೆ. ಮಲ್ಲಯ್ಯನಂತ ವರಿಗೆ ಗ್ರಾಮದ ಜೊತೆ ಇದ್ದ ಭಾವನಾತ್ಮಕ ಸಂಬಂಧಗಳು ನಾಶವಾಗಿವೆ. ಹಲವು ಕುಟುಂಬಗಳ ಸಂಬಂಧಗಳು ನಶಿಸಿವೆ, ರೋಗ ರುಜಿನಗಳು ಆವರಿಸಿವೆ. ಇಡೀ ಗ್ರಾಮದ ಜನ ಸಮುದಾಯ ಛಿದ್ರವಾಗಿದೆ. ಹೀಗೆ ಗಣಿಗಾರಿಕೆಯಿಂದಾದ ಅನೇಕ ಸಮಸ್ಯೆಗಳು ಮತ್ತು ತಲ್ಲಣಗಳನ್ನು ತಮ್ಮ ಕಥೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಗೌಡರ ವರ್ಣನೆ: ಮಲ್ಲಪ್ಪ ಗೌಡ ತನ್ನ ಮನಸ್ಸಿಗೆ ಬಂದದ್ದನ್ನು ಇಂದು ಮುಂದು ನೋಡದೆ ಮಾಡುತ್ತಿದ್ದ. ಊರುಕೇರಿ ತನ್ನ ಸ್ವತ್ತು ಎಂಬಂತೆ ವರ್ತಿಸುತ್ತಿದ್ದ. ಈ ಗುಣದಿಂದಲೇ ಮೂಲಿಮನೆ ಸಂಗಪ್ಪನ ತಂಗಿಯನ್ನು ಹೊತ್ತು ತಂದು ಇಟ್ಟುಕೊಂಡಿದ್ದ ನಂತರ ಬಿಟ್ಟಿದ್ದ ಮಾನಸಯ್ಯನ ಅಳೆತ್ತರ ಜೋಡಿ ಎತ್ತುಗಳನ್ನು ಹಾಡುಹಗಲೇ ಹೊಡೆದು ತಂದು ತನ್ನ ಅಂಕಣಕ್ಕೆ ಕಟ್ಟಿಕೊಂಡಿದ್ದ. ನಾಯಕರ ಬಸಪ್ಪನ ಹಿರೆಕುದುರೆಯನ್ನ ಕಿತ್ತುಕೊಂಡು ಅತ್ತಿ ಮೆರೆದಿದ್ದ ಬಣಜೀರ ರಾಮಪ್ಪ ಮಾಡಿಸಿಕೊಂಡಿದ್ದ ದೊಡ್ಡ ಎತ್ತಿನ ಬಂಡಿಯನ್ನು ಬಳಸಿಕೊಂಡು ತಂದು ತನ್ನ ಅಂಗಳದಲ್ಲಿ ನಿಲ್ಲಿಸಿಕೊಂಡಿದ್ದ ಇಂತಹ ಹತ್ತಾರು ಕೃತ್ಯಗಳನ್ನು ಉದ್ದಕ್ಕೂ ಮಾಡುತ್ತಾ ಊರುಕೇರಿ ಮಂದಿಗೆ ದುರುಳನಾಗಿದ್ದ.

ಪೊಲೀಸ್‌ನವರ ದರ್ಪ: ಲೇ ಕತ್ತೆ ಸೂಳೇರೆ ಅಂತ ಒದರುತ್ತ ಎದ್ದು ಬಡಿಗೆಯಿಂದ ಸಿಕ್ಕ ಸಿಕ್ಕವರನ್ನು ಜಜ್ಜ ತೊಡಗಿದ. ಅದಕೊಂಡು ಹೆದ್ದು

ಮತ್ತವನ ಜೊತೆಯ ಪೊಲೀಸನವನು ಕೈಗೂಡಿಸಿದರು. ಗಳಿಗೆ ಹೊತ್ತಿಗೆ ರಣರಂಪವಾಗಿ ಬರಿ ಟಪ್ ಟಪ್ ಅಂತ ಬೀಳುವ ಏಟುಗಳು, ಒದರಾಟ, ಚೀರಾಟ, ಬೊಬ್ಬೆಗಳಿಂದ ಕೇರಿಯು ತತ್ತರಿಸಿತು. ಅದೇ ಗಾವಂತ ಕೆಲವರು ತಮ್ಮ ತಮ್ಮ ಚಿಕ್ಕೋರನ್ನ ಎತ್ತಿಕೊಂಡು ಪರಾರಿಯಾಗಿ ಬಿಟ್ಟರು. ಅದಕಂಡು ಮತ್ತಷ್ಟು ಬೆಂಕಿಯಾದ ಪೊಲೀಸರು ಗಂಡಸರಿಗಿಂತ ಹೆಂಗಸರ ಮೇಲೆ ಸಿಟ್ಟುಗೊಂಡರು. ಎಲ್ಲಾ ಸೂಳೆರನ್ನ ಕೂದಲು ಹಿಡಿದು ಲಾಕಪ್ಪಿಗೆ ಹಾಕಿ ಚರಮ ಸುಲಿದು ಬಿಡ್ತೀನಿ.

ಬಡತನ: ಲಿಂಗೇಶ ಪರಕ್ಕನ ನೋಡಾಕ ಹುಲುಗಯ್ಯನ ಹಿಂದೆ ಪಕ್ಕದ ಸೆಡ್ಡಿಗೆ ನಡೆದ ಸೆಡ್ಡಿನಾಗ ದಣಿಯ ಟ್ರಾಕ್ಟರ್, ಬುಲೆಟ್ ಗಾಡಿ ನಿಂತಿದ್ದವು. ಈ ಗಾಡಿಗಳ ಹಳೆವಸ್ತುಗಳ ಒಕ್ಕಲುತನದ ಸಾಮಾನುಗಳು ತುಂಬಿದ್ದವು. ಪರಕ್ಕ ಹಗಲೆಲ್ಲ ದನಕಾದು, ರಾತ್ರಿ ಮಲ್ಕೆರೆಡಪ್ಪನ ಮನೇಲಿ ಉಂಡು ಬಂದು ಈ ಸೆಡ್ಡಿನಾಗ ಮಕ್ಕಂತಿತ್ತು. ಹುಲುಗಯ್ಯನಿಗಿಂತ ಲಿಂಗೇಶನಿಗೆ ಕುತೂಹಲ ಜಾಸ್ತಿಯಾಗಿ ಬಡಬಡ ಬಂದು ಮೂಲ್ಯಾಗ ಬಿದ್ದುಕೊಂಡಿದ್ದ. 'ಪರಕ್ಕನ್ನ ಬೆರಗಿನಿಂದ ದಿಟ್ಟಿಸಿ ನೋಡಿದ ಕತ್ತಲಾದಾಗ ಪರಕ್ಕ ಬಿದ್ದಿತ್ತು ಹರಿದು ಚಿಂದಿಯಾದ ಕಂಬಳಿಯಾಗ ಅದರ ತಲೆ ಕಂಡಿತು! ಮೈಯಾಗ ಸುತ್ತುತ್ತಿದ್ದ ಗೋಣಿಚೀಲ, ಸೊಂಟಕ್ಕೆ ಕಟ್ಟಿದ ಸೀರೆ ಎರಡೂ ಕೂಡಿಕೊಂಡು ಹಳೆ ಸಾಮಾನು ತುಂಬಿ ಬಿಸಾಕಿದ್ದ ಮೂಟೆಯಂಗ ಕಂಡಿತು'!

ಆಟಗಳು: ಹಬ್ಬ ಹರಿದಿನಗಳ ಹಿಂದೆ ಮುಂದೆ ಆಟಗಳು ಸರ್ವೇಸಾಮಾನ್ಯವಾಗಿದ್ದವು. ನಿಜಾಮ್ ಸಾಬ್ ಕೈಗುಂಡಿನ ಆಟದಲ್ಲಿ ನಿಸ್ಸೀಮನಾಗಿದ್ದ. ಈ ಆಟಗಳು ನಿಯಮದಿಂದ ಕೂಡಿದ್ದವು ಹಿಂದೆ ಕೈಗೊಂಡಿನ ಆಟ ಮತ್ತು ಇತರ ಆಟಗಳು ಮನರಂಜನೆಯ ಆಟವಾಗಿದ್ದವು, ಅವು ಬರಬರುತ್ತಾ ಜೂಜಾಟವಾಗಿ ಪರಿವರ್ತನೆಯಾದವು. ಇದಕ್ಕೆ ಪೊಲೀಸ್ ಸಪೋರ್ಟ್ ಸಹ ಸಿಕ್ಕಿತು. ಕರೆಗುಂಡುಡು ಎತ್ತುವ ಆಟ, ಇಸ್ಪೀಟ್ ಎಲೆ ಹಾಕುವ ಆಟ, ಬಿಲ್ಲಿ ತೂರುವ ಆಟ, ಮಕ್ಕಳು ಆಡುವ ಮದುವೆ ಆಟ, ಹೆಂಗಸರ ಕೋಲಾಟ, ಡೊಳ್ಳು ಕುಣಿತ ಮುಂತಾದ ಪ್ರಾದೇಶಿಕ ಆಟಗಳನ್ನು ಕಾಣಬಹುದು.

ಧಾರ್ಮಿಕ ಆಚರಣೆಗಳು: ಹಬ್ಬಹರಿದಿನಗಳಲ್ಲಿ ನಡೆಯುವ ಆಚರಣೆಗಳು, ಜಾತ್ರೆಗಳು, ಕೆಲವು ಪದ್ಧತಿಗಳ ಆಚರಣೆ, ದೇವದಾಸಿ ಪದ್ಧತಿ, ಮಾರಮ್ಮನ ಜಾತ್ರೆ, ಬಸಣ್ಣ ದೇವರ ಜಾತ್ರೆ ಮುಂತಾದ ಆಯಾ ಗ್ರಾಮಗಳಲ್ಲಿ ನಡೆಯುವ ಆಚರಣೆಗಳನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ನೋಡಬಹುದು.

ಗಂಡು ಹೆಣ್ಣುಗಳ ಸಂಬಂಧ: ಅಮರೇಶರು ಬಹುತೇಕ ಕಥೆಗಳಲ್ಲಿ ಗಂಡು ಹೆಣ್ಣುಗಳ ನಡುವಿನ ಸಂಬಂಧವನ್ನು ಬಹಳ ಸಹಾನುಭೂತಿಯಿಂದ ಹಾಗೂ ಮಾನವೀಯ ನೆಲೆಯಲ್ಲಿ ನೋಡುತ್ತಾರೆ. ಕೆಲವು ಸ್ತ್ರೀಯರು ವ್ಯವಸ್ಥೆಯ ಅನಿವಾರ್ಯತೆಯಿಂದಾಗಿ ಪುರುಷರ ದಬ್ಬಾಳಿಕೆಯೊಳಗೆ ಸಿಲುಕಿ ನಲುಗಿರುವವರು. ಚಂದವ್ವ, ಮೂಲಿಮನೆ ಸಂಗವ್ವ ಇನ್ನು ಕೆಲವರು ತಮ್ಮ ಗಂಡಂದಿರ ನಿರ್ವೀರ್ಯತೆಯಿಂದಾಗಿ ಪರಪುರುಷರ ಸಂಬಂಧವನ್ನು ಬಯಸಿದವರು. ಗಂಗಮ್ಮ–ಕರ್ಣ, ಅಕ್ಕಮ್ಮ–ಲಿಂಗ ಮೊದಲಾದವರು. ಇನ್ನೂ ಕೆಲವು ಸ್ತ್ರೀಯರು ಲೈಂಗಿಕ ತೆವಲನ್ನೇ ಮುಖ್ಯವಾಗಿಟ್ಟುಕೊಂಡವರು. ಕೋಳಿ ಚೆನ್ನಮ್ಮ, ಭೀಮಕ್ಕ, ಮಾರಮ್ಮ ಮುಂತಾದ ಕೆಲವು ಸ್ತ್ರೀಯರು ಭಾವನಾತ್ಮಕ ನೆಲೆಯಲ್ಲಿ ಸಂಬಂಧ ಹೊಂದಿದವರು. ಸುಮ್ಮಿ– ಮಾಲಿಂಗ, ಅಕ್ಕಮ್ಮ–ಚೆನ್ನ ಹೀಗೆ ಹಲವು ಸ್ತ್ರೀಯರ ಸಂಬಂಧದ ಗುಣ ಸ್ವಭಾವಗಳನ್ನೂ ಚಿತ್ರಿಸಿದ್ದಾರೆ. ಇವುಗಳಿಗೆಲ್ಲ ಮಾನವೀಯತೆಯ ಸ್ಪರ್ಶವಿದೆ. ಅಲ್ಲದೆ ಬಹುತೇಕ ಸ್ತ್ರೀ ಪಾತ್ರಗಳು ತಮ್ಮ ಗಂಡಂದಿರನ್ನು ತಾವೇ ದುಡಿದು ಸಾಕಬೇಕಾದ ಪರಿಸ್ಥಿತಿಗೆ ಸಿಲುಕಿದವರಾಗಿದ್ದಾರೆ. ಹೀಗೆ ತಮ್ಮ

ಕಥೆಗಳಲ್ಲಿ ಗಂಡು ಹೆಣ್ಣಿನ ಸ್ವಭಾವಗಳ ವೈಶಿಷ್ಟವನ್ನು ತಿಳಿಸಿದ್ದಾರೆ.

ಪ್ರಾದೇಶಿಕ ಭಾಷೆಯ ಬಳಕೆ: ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಸುತ್ತಮುತ್ತಲು ಇರುವ ಜವಾರಿ ಭಾಷೆಯ ತಾಜಾತನದ ಕಸುವುಳ್ಳ ಭಾಷೆಯನ್ನು ತಮ್ಮ ಬಹುತೇಕ ಕಥೆಗಳಲ್ಲಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಅವರ ಭಾಷಾ ವೈಶಿಷ್ಟಕ್ಕೆ ಉದಾಹರಣೆಯಾಗಿ ಕಾಗಿಕೂಟ ಕತೆಯಲ್ಲಿಯ ಉದ್ಧರಣೆಯೊಂದಿಗೆ ನೋಡುವುದಾದರೆ ಲಿಂಗು ಸತ್ತ ಸುದ್ದಿ ಕೇಳಿ ದ್ಯಾವಮ್ಮ ನೀನು ಪುಣ್ಣ ಮಾಡಿ ಹುಟ್ಟಲಿಲ್ಲವ್ವೋ ಪಾಪಿಮಗ್ಳೇ! ಲಿಂಗುರಾಜನೇ ನಿನ್ನ ಗಂಡಾಂಥ ಊರುಕೇರಿಗೆ ಡಂಗೂರ ಸಾರಿದ್ದೇನವ್ವೋ .! ನೀನು ಮೈನೆರ್ತಗಳಿಗೆ ನೆಟ್ಗಿಲ್ಲವ್ವೋ! ಯಾ ಸೂಳೇರ ಕಣ್ಣು ನಿನ್ನ ತಾಕ್ಯಾದವ್ವೋ! ನೀನು ಪರದೇಶಿಯಾಗಿ ಬುಟ್ಟೆ! ಸುಮ್ಮೀ ಹೇ ಸುಮ್ಮೀ, ಸುಮ್ಮಿ ಅಳದು ಸುರು ಮಾಡಿದಳು. ಮುಗಿಲಿಗೆ ಮುಖ ಮಾಡಿ ಕೈಬೀಸಿ, ಬೀಸಿ "ಲಿಂಗು ಮಾಮನ್ನೇ ನನ್ಗಂಡ ಅಂತ ನಾನೇಟು ಹಿಗ್ಗಿದ್ದೆನವ್ವೋ ಯಪ್ಪಾ! ಎಲ್ಲಾ ಮಣ್ಣಾಗಿ ಹೋಯಿತಲ್ಲವ್ವೋ ಯಪ್ಪಾ! ಈಗ ನನ್ಗ ಯಾರ ಗತಿಯೋ" ಅಂತ ಅಳುತ್ತಾ ಅಪ್ಪನನ್ನ ಬಿಗಿದುಕೊಂಡಳು. ಉಳಿದೆರಡು ಗಂಡು ಮಕ್ಕಳನ್ನು ತೆಕ್ಕೆಗೆ ಬಡ್ಕೊಂಡು ನನ ತಮ್ಮ ನಿಂಗುರಾಜ ಸತ್ತ ನಂತವ್ವೋ ಯವ್ವಾ! ನಾನೆಂಗ ನಂಬಲಿ ಸತ್ತಾನಂದ್ರೇ ಯವ್ವಾ!... ಹೀಗೆ ನುಗಡೋಣಿಯವರು ಗ್ರಾಮೀಣ ಪ್ರದೇಶದ ನೈಜವಾದ ಭಾಷೆಯನ್ನು ತಂದಿದ್ದಾರೆ.

ವ್ಯಕ್ತಿನಾಮಗಳು: ಗ್ರಾಮ ನಾಮಗಳು ಒಂದು ಪ್ರದೇಶದ ಐಡೆಂಟಿಟಿಯನ್ನು ಹೇಳುತ್ತವೆ. ಬಸವಲಿಂಗಪ್ಪಗೌಡ, ಶಾಂತನಗೌಡ, ದ್ಯಾವಮ್ಮ, ಮಾರಮ್ಮ, ಹುಲಗಯ್ಯ, ಹುಲಗಮ್ಮ, ಊರವ್ವ ಮುಂತಾದ ಹೆಸರುಗಳು ಅಮರೇಶ ಅವರ ಕಥೆಗಳಲ್ಲಿ ಬರುತ್ತವೆ. ಅದಕ್ಕೆ ಮುಖ್ಯ ಕಾರಣ ಆಯಾಯ ಊರುಗಳಲ್ಲಿರುವ ದೇವರುಗಳಾಗಿವೆ. ಇಲ್ಲಿ ಬರುವ ಬುರ ಡೊಳ್ಳ, ಡೋರ್ಯ, ಪೀರಿ, ಸಿಳ್ಳ, ನಡ್ಯ, ಗಂಗಿ, ಇಸ, ಮಾಬಿ, ಪರಕ್ಕ, ಜಿರಮಲ್ಲ, ಭೀಮ, ಊರವ್ವ, ಮಲ್ಲವ್ವ ಮುಂತಾದ ಹೆಸರುಗಳು ಅಲಕ್ಷಿತ ಸಮುದಾಯದವರಿಗಿಟ್ಟ ಹೆಸರುಗಳು.

ಪ್ರಾದೇಶಿಕ ಶಬ್ದಗಳು: ಅಮರೇಶ ನುಗಡೋಣಿಯವರ ಕಥೆಗಳಲ್ಲಿ ರಾಯಚೂರು ಅದರ ಸುತ್ತಮುತ್ತಲು ಜನರು ಮಾತನಾಡುವ ಪದಗಳನ್ನು ಕಾಣಬಹುದು. ಬಚರು–ಬಸುರು, ಸತುವು–ಶಕ್ತಿ, ಸಂಜಿಕ–ಸಂಜಿಗೆ, ಸೂಯ್ರ–ಸೂರ್ಯ, ಸೆಂದ್ರ–ಚಂದ್ರ, ತಿಂಡಿ–ಕಡಿತ, ನವೆ, ಬಕ್ಬಾರ್ಲ–ಮಕ್ಕಡೆಬೀಳು, ಬಾಡ್ಕಾವ್ ಗಲ್ತಿಹೋಗಯಸಾಬ್, ಕರಾಬ್ ಹೋಗಯಾ ಮುಂತಾದ ಪದಗಳನ್ನು ಹಾಗೂ ಈ ಭಾಗದ ಜನಸಾಮಾನ್ಯರು ಸಹಜವಾಗಿ ಬಳಸುವ ಪದಗಳನ್ನು ಲೇಖಕರು ನೇರವಾಗಿ ತೆಗೆದುಕೊಂಡಿದ್ದಾರೆ.

ನುಡಿಗಟ್ಟುಗಳು: ಅಮರೇಶ ನುಗಡೋಣಿಯವರು ತಮ್ಮ ಕಥೆಗಳಲ್ಲಿ ರಾಯಚೂರಿನ ಜಿಲ್ಲೆ, ಮಾನ್ವಿ ತಾಲೂಕಿನ ಸುತ್ತಮುತ್ತಲು ಜನರಾಡುವ ನುಡಿಗಟ್ಟುಗಳನ್ನು, ಗಾದೆಗಳನ್ನು ಯಥಾವತ್ತಾಗಿ ಬಳಸಿಕೊಂಡಿದ್ದಾರೆ.

- ಅವಸರದಾಗ ಮುದುಕಿ ಮೈನೆರ್ಥಳು ಅಂತಾರಲ್ಲ ಹಂಗಾಯಿತು.
- ಕಸದ ಗುಡ್ಡೆ ಬಿದ್ದಂಗ್ ಬಿದ್ದಿದೆ.
- ಹಣಿಕೆ ಹಾಕಿದವುರ ಮೇಲೆ ಬಂದೀತಂತೆ.
- ಕಪ್ಪೆಗಳನ್ನ ತೂಕ ಮಾಡಿದಂಗೆ.
- ಕತ್ತೆ ಆಕಳ ಜೋಡಿ ಅದಂಗೈತಿ..
- ಜನ ಮರುಳು ಜಾತ್ರೆ ಮರಳೂ ಸೆಂಟ ಮರುಳು ಸಿದ್ದೇಶ.

ಹೀಗೆ ಅಮರೇಶರ ಕಥಾ ಜಗತ್ತಿನಲ್ಲಿ ಒಂದು ತಾತ್ವಿಕತೆಯನ್ನು ನೀಡುತ್ತಲೇ ರಾಯಚೂರು ಭಾಗದ ಗ್ರಾಮೀಣ ಜಗತ್ತಿನ ಎಲ್ಲಾ ಭಾಷಾ ಸಮೃದ್ಧತೆಯನ್ನು ಕೊಳ್ಳೆ ಹೊಡೆದಿದ್ದಾರೆ. ಗ್ರಾಮವನ್ನು ಸಮುದಾಯಿಕ

ಜೀವನಕ್ಕೆ ಆಕರ್ಷಿಸುವ ಹಲವು ಆಚರಣೆಗಳು, ಸಂಪ್ರದಾಯಗಳು, ಹಬ್ಬಗಳು, ಜಾತ್ರೆಗಳು ಹರಡಿಕೊಂಡಿವೆ. ತುಂಬಿ ಹಾರುವ ಹೊಳೆ. ತೆನೆ ತೂಗುವ ಬೆಳೆ, ಪ್ರಕೃತಿಯ ಸೊಬಗು ಹಕ್ಕಿ- ಪಕ್ಷಿ ಪ್ರಾಣಿ ಪ್ರಪಂಚ ಎಲ್ಲವೂ ಅವರ ಕಥೆಗಳಿಗೆ ಒಂದು ಅನನ್ಯ ಪ್ರಾದೇಶಿಕ ವಾಸನೆಯನ್ನು ಚಾಪಿಸಿವೆ.

ಹೀಗೆ ಅಮರೇಶ ನುಗಡೋಣಿಯವರು ತಮ್ಮ ಕಥೆಗಳಲ್ಲಿ ದಟ್ಟವಾದ ಗ್ರಾಮೀಣ ಬದುಕಿನ ವಿವಿಧ ಮುಖಗಳನ್ನು ತಿಳಿಸಿಕೊಡುವುದರ ಜೊತೆ ಜೊತೆಗೆ ಅಲ್ಲಿನ ಪ್ರಾದೇಶಿಕತೆಯ ಸೊಗುಡು, ಆಡುಭಾಷೆಯ ವೈವಿಧ್ಯತೆಯನ್ನು ಕಟ್ಟಿಕೊಟ್ಟು ವೈಶಿಷ್ಟ್ಯತೆಯನ್ನು ಮೆರೆದಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಅಮರೇಶ ನುಗಡೋಣಿ. (1995). *ಬಿಸಿಲ ಹನಿಗಳು.* ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು.
- ಅಶೋಕ, ಟಿ.ಪಿ. (2014). *ಕಥನ ಕಾರಣ.* ಮನೋಹರ ಗ್ರಂಥಮಾಲ.
- ಗಿರಡ್ಡಿ ಗೋವಿಂದರಾಜ. (ಸಂ.). (2001). *ಕುಂ.ವಿ. ಅವರ ಕಥಾಸಾಹಿತ್ಯ.* ಕರ್ನಾಟಕ ಸಾಹಿತ್ಯ ಅಕಾಡೆಮಿ
- ಕಂನಾಡಿಗ ನಾರಾಯಣ. (2010). *ಕಾಲಕರಗುವ* ಮುನ್ನ. ಸಿವಿಜಿ ಇಂಡಿಯಾ.
- ಕರಿಗೌಡ ಬಿಚನಹಳ್ಳಿ. (2011). *ಶತಮಾನದ ಸಣ್ಣ ಕಥೆಗಳು ಸಮೀಕ್ಷೆ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಪ್ರಹ್ಲಾದ ಅಗಸನಕಟ್ಟೆ. (2010). *ಆಯಾಚಿತ.* ಕನ್ನಡ ಕಣ್ವ ಪಬ್ಲಿಕೇಶನ್ ಪ್ರೈವೇಟ್ ಲಿಮಿಟೆಡ್.